ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09**

ಸಂಖ್ಯೆ: ಸಿಎಸಿ-4/ಬಿ.ಇಡಿ.ದಾ-01/2020-21 ದಿನಾಂಕ: 24-03-2021

# ಪ್ರಕಟಣೆ

2020-21 ನೇ ಸಾಲಿನ ಬಿ.ಇಡಿ ಕೋರ್ಸಿಗೆ ಸರ್ಕಾರಿ ಕೋಟಾದಡಿ ಅಭ್ಯರ್ಥಿಗಳನ್ನು ದಾಖಲಾತಿ ಮಾಡುವ ಸಂಬಂಧ ಮೊದಲ ಸುತ್ತಿಗೆ ಆಯ್ಕೆ ಪಟ್ಟಿಯನ್ನು ದಿನಾಂಕ: 04-03-2021ರಂದು ಪ್ರಕಟಿಸಲಾಗಿತ್ತು. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಾಖಲಾತಿ ಶುಲ್ಕ ಪಾವತಿಸಿ ದಾಖಲು ಮಾಡಿಕೊಳ್ಳಲು ದಿನಾಂಕ: 20-03-2021ರವರೆಗೆ ಅವಕಾಶ ಕಲ್ಪಿಸಲಾಗಿತ್ತು.

ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ಈ ಕೆಳಕಂಡ ಬಿ.ಇಡಿ ಕಾಲೇಜುಗಳ ಮಾನ್ಯತೆಯನ್ನು NCTE ಸಂಸ್ಥೆಯು ರದ್ದುಪಡಿಸಿರುತ್ತದೆ ಹಾಗೂ ಕೆಲವು ಕಾಲೇಜುಗಳ Intake ಅನ್ನು ಕಡಿಮೆ ಮಾಡಿರುತ್ತದೆ.

| ಕ್ರ.ಸಂ | ಕಾಲೇಜಿನ ಹೆಸರು | ಮರು ಹಂಚಿಕೆ ಮಾಡಲಾದ ಅಭ್ಯರ್ಥಿಗಳ ಸಂಖ್ಯೆ | ಷರಾ |
|---|---|---|---|
| 1 | KSR College of Education, Belgaum | 74 | ಮಾನ್ಯತೆ ರದ್ದಾಗಿರುತ್ತದೆ |
| 2 | Sri Siddhi Vinayak Rural College, Belgaum | 49 | ಮಾನ್ಯತೆ ರದ್ದಾಗಿರುತ್ತದೆ |
| 3 | SMRK Mahila Vidya Vardhak College of Education, Bijapur | 50 | ಮಾನ್ಯತೆ ರದ್ದಾಗಿರುತ್ತದೆ |
| 4 | Sri Fulsing Narayan Chavan College of Education, Bijapur | 50 | ಮಾನ್ಯತೆ ರದ್ದಾಗಿರುತ್ತದೆ |
| 5 | KGVA Sangha's Matoshree Kantamma, Bijapur | 49 | ಮಾನ್ಯತೆ ರದ್ದಾಗಿರುತ್ತದೆ |
| 6 | Kumari Monika Basavaraj Kanni BEd college, Bijapur | 50 | ಮಾನ್ಯತೆ ರದ್ದಾಗಿರುತ್ತದೆ |
| 7 | AIM College of Education, Bidar | 47 | ಮಾನ್ಯತೆ ರದ್ದಾಗಿರುತ್ತದೆ |
| 8 | Hasanamba College of Education, Hassan | 38 | Intake ಅನ್ನು 75 ರಿಂದ 38ಕ್ಕೆ ಇಳಿಸಿದೆ |
| 9 | Institute of Education, Omkarmal Somanin College of Education, Mysore | 40 | Intake ಅನ್ನು 75 ರಿಂದ 38ಕ್ಕೆ ಇಳಿಸಿದೆ |

NCTE ಯ ಈ ಕ್ರಮದಿಂದ ಮೂಲ ಆಯ್ಕೆ ಪಟ್ಟಿಯಲ್ಲಿ ಸದರಿ ಕಾಲೇಜುಗಳಿಗೆ ಹಂಚಿಕೆಯಾಗಿದ್ದ 447 ಅಭ್ಯರ್ಥಿಗಳಿಗೆ ಅನಾನುಕೂಲವಾಗಿದ್ದು, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಅಭ್ಯರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇವರನ್ನು ಮಾತ್ರ ಪರಿಗಣಿಸಿ ಸೀಟು ಹಂಚಿಕೆ ಸಹಿತ ಪ್ರತ್ಯೇಕ ಆಯ್ಕೆ ಪಟ್ಟಿಯನ್ನು (ಮೊದಲ ಸುತ್ತಿನ ಎರಡನೇ ಪಟ್ಟಿ) ಸಿದ್ಧಪಡಿಸಿ ದಿನಾಂಕ: 24-03-2021ರಂದು ಇಲಾಖಾ ವೆಬ್ ಸೈಟ್ ನಲ್ಲಿ

ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ನಿಯಮಾನುಸಾರ ಆನ್ ಲೈನ್ ಮೂಲಕ ದಾಖಲಾತಿ ಶುಲ್ಕ ಪಾವತಿಸಿ, ತಮಗೆ ಸಂಬಂಧಿಸಿದ ಪರಿಶೀಲನಾ ಕೇಂದ್ರಗಳಿಗೆ ಮೂಲ ದಾಖಲೆಗಳೊಂದಿಗೆ ಹಾಜರಾಗಿ ಶುಲ್ಕ ಪಾವತಿಸಿದ ಬಗ್ಗೆ ಮಾಹಿತಿ ನೀಡಿ ದಾಖಲಾತಿ ಪತ್ರವನ್ನು ಪಡೆದು ಕಾಲೇಜುಗಳಲ್ಲಿ ದಾಖಲಾಗಲು ದಿನಾಂಕ: 25-03-2021 ಮತ್ತು 26-03-2021ರಂದು ಎರಡು ದಿನಗಳು ಮಾತ್ರ ಅವಕಾಶ ಕಲ್ಪಿಸಿದೆ. ಈ ಪಟ್ಟಿಯಲ್ಲಿ ತಮಗೆ ಹಂಚಿಕೆಯಾದ ಅಭ್ಯರ್ಥಿಯು ಒಂದು ವೇಳೆ ಕಾಲೇಜಿಗೆ ದಾಖಲಾತಿ ಹೊಂದಲು ಬಯಸದೇ ಹೋದರೆ ಅವರಿಗೆ ಮತ್ತೊಂದು ಅವಕಾಶ ಮಾತ್ರ ನೀಡಲಾಗುವುದು.

**ಸೂಚನೆ: ಸದರಿ ಪಟ್ಟಿಯಲ್ಲಿ ಹಂಚಿಕೆಯಾದ ಅಭ್ಯರ್ಥಿಗಳಲ್ಲಿ ಕೆಲವು ಅಭ್ಯರ್ಥಿಗಳು ಈ ಹಿಂದಿನ ಪಟ್ಟಿಯಂತೆ ಆನ್ ಲೈನ್ ಮೂಲಕ ದಾಖಲಾತಿ ಶುಲ್ಕವನ್ನು ಈಗಾಗಲೇ ಪಾವತಿಸಿರುತ್ತಾರೆ. ಈ ರೀತಿ ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಪ್ರಸ್ತುತ ಹಂಚಿಕೆಯಾದ ಕಾಲೇಜಿಗೆ ಅನುಗುಣವಾಗಿ (ಅನುದಾನಿತ ಹಾಗೂ ಅನುದಾನ ರಹಿತ) ನಿಗದಿಪಡಿಸಿದ ಶುಲ್ಕವನ್ನು ಪಾವತಿಸಬೇಕಾಗುತ್ತದೆ.**

ವಿಶೇಷಾಧಿಕಾರಿ